

ಬೆಂಗಳೂರು ನಗರಕ್ಕೆ ನೀರು ಪೂರೈಸುವ ಕಾರಣಕ್ಕಾಗಿ ನಿರ್ಮಿಸಲು ಉದ್ದೇಶಿಸಿರುವ ಜಲಾಶಯ ಕಾರ್ಯರೂಪಕ್ಕೆ ಬಂದಲ್ಲಿ ಮೇಕೆದಾಟುವಿನ ಈ ಸಮೃದ್ಧಿ ಉಳಿದೀತೆ? ಸ್ಥಳೀಯ ಅಗತ್ಯಗಳನ್ನು ಪ್ರಾದೇಶಿಕವಾಗಿಯೇ ಬಗೆಹರಿಸಿಕೊಳ್ಳುವ ಸಾಧ್ಯತೆಗಳು ಯಾಕೋ ನಮಗೆ ಮೋಹಕವಾಗಿ ಕಾಣಿಸುವುದಿಲ್ಲ.

ಸಂಪದ್ಭರಿತ ಹಳ್ಳಿಗಳಲ್ಲಿ ಏಕರೂಪವಾಗುತ್ತಿರುವಾಗ, ನಗರ ಪ್ರದೇಶಗಳಲ್ಲಿ ಲಭ್ಯವಾಗಿರುವ ಸೌಕರ್ಯಗಳು ಅರಣ್ಯದ ಅಂಚಿನಲ್ಲಿರುವ ಗ್ರಾಮಗಳಿಗೆ ಏಕೆ ಸಿಗಬಾರದು ಎಂಬ ಪ್ರಶ್ನೆಗಳು ಎದುರಾಗುತ್ತಿವೆ. ಅಂದರೆ ಇಡೀ ಮನುಕುಲಕ್ಕೇ ಒಳಿತಾಗುವಂತಹ ಹಸಿರು ಸಂಪತ್ತನ್ನು ಹೊತ್ತುಕೊಂಡ ಇಂತಹ ಊರುಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಅವಕಾಶಗಳಿಲ್ಲ; ಅಲ್ಲಿ ಉದ್ಯೋಗ ಸೃಷ್ಟಿಗೆ ಅವಕಾಶಗಳಿರುವುದಿಲ್ಲ. ಅತ್ಯುತ್ತಮವಾದ ರಸ್ತೆಗಳಿಗೆ ಅವಕಾಶವಿಲ್ಲ. 'ನಾವೇ ಏಕೆ ಈ ತ್ಯಾಗವನ್ನು ನಿರಂತರವಾಗಿ ಮಾಡಬೇಕು?' ಎಂಬ ಪ್ರಶ್ನೆಗಳನ್ನು ಅಲ್ಲಿನ ಜನರು ಕೇಳಲಾರಂಭಿಸಿದ್ದಾರೆ. ಹೀಗೆ ತ್ಯಾಗ ಮಾಡುವಂತೆ ಪ್ರೇರೇಪಿಸುವ ಒತ್ತಡವೇ, ಪರೋಕ್ಷವಾಗಿ ನಗರೀಕರಣಕ್ಕೆ ನೀಡುವ ಪ್ರೋತ್ಸಾಹದಂತೆ ಭಾಸವಾಗುತ್ತದೆ. ಯುವಜನರು ನಗರಗಳತ್ತ ದೌಡಾಯಿಸಿ, ನಗರಗಳ ಜನಸಂಖ್ಯೆ ಹೆಚ್ಚಾಗಿ, ಮತ್ತೆ ಅಲ್ಲಿಗೇ ನೀರು ಪೂರೈಸುವ, ಆಹಾರ ಸಂಪನ್ಮೂಲಗಳನ್ನು ಪೂರೈಸುವ ಒತ್ತಡವು ಸೃಷ್ಟಿಯಾಗುತ್ತದೆ. ಇದು ಪಶ್ಚಿಮ ಘಟ್ಟದ ತಪ್ಪಲಿನಲ್ಲಿರುವ ಹಳ್ಳಿಗಳಲ್ಲಿ ಮಾತ್ರ ಚರ್ಚೆಯಾಗುತ್ತಿರುವ ವಿಷಯವಲ್ಲ. ದೇಶದ ಇತರ ರಾಜ್ಯಗಳಲ್ಲಿಯೂ ಜಾಗತಿಕವಾಗಿಯೂ ಈ ಚರ್ಚೆಗಳು ಬಹುಕಾಲದಿಂದ ನಡೆದಿವೆ.

ಭಾರತದ ಉಳಿದ ರಾಜ್ಯಗಳಿಗೆ ಹೋಲಿಸಿದರೆ ದಟ್ಟ ಕಾನನಗಳಿರುವ ಉತ್ತರಾಖಂಡ, ಛತ್ತೀಸಗಢಗಳಲ್ಲಿ ಕೈಗಾರಿಕೆಗಳು, ಅಭಿವೃದ್ಧಿ ಕಾರ್ಯಗಳ ಪ್ರಮಾಣ ಕಡಿಮೆ. ಹಾಗಾಗಿ ಅವು ಅಭಿವೃದ್ಧಿ ಕ್ಷೇತ್ರದ ಚರ್ಚೆಗಳಲ್ಲಿ 'ಹಿಂದುಳಿದ ರಾಜ್ಯ'ಗಳೆಂದು ಗುರುತಿಸಿಕೊಳ್ಳುತ್ತವೆ. ಆರ್ಥಿಕ ಕ್ಷೇತ್ರದ ಚರ್ಚೆಗಳಲ್ಲಿ ಅಂತಹ ರಾಜ್ಯಗಳ ಪ್ರಸ್ತಾಪ ಕಡಿಮೆಯಿರುತ್ತದೆ. ಇದಕ್ಕೆ ಇನ್ನೊಂದು ದಿಕ್ಕಿನಲ್ಲಿ ಪರಿಸರದ ಮೇಲೆ ಒತ್ತಡ ಉಂಟುಮಾಡುವ ರಾಜ್ಯಗಳು ಅಭಿವೃದ್ಧಿ ಚಟುವಟಿಕೆಗಳ ಹೆಸರಿನಲ್ಲಿ ಸುದ್ದಿ ಮಾಡುತ್ತವೆ. ದಟ್ಟ ಪ್ರಕೃತಿಯ ಹಸಿರನ್ನು 'ಸಂಪತ್ತು' ಎಂದು ಮನ್ನಿಸುವ ಮಾನದಂಡಗಳೇ ಬೇರೆ. ಜನರ ದೈನಂದಿನ ಜೀವನದಲ್ಲಿ 'ಸಂಪತ್ತು' ಎಂಬುದನ್ನು ಗುರುತಿಸುವ ಮಾನದಂಡಗಳೇ ಬೇರೆ. ಈ ಅಂತರವನ್ನು ಕಡಿಮೆ ಮಾಡಬೇಕಾದರೆ, ಮನುಕುಲದ ಭವಿಷ್ಯಕ್ಕಾಗಿ ಹಸಿರು ಸಂಪತ್ತನ್ನು ರಕ್ಷಣೆ ಮಾಡುವವರಿಗೆ ವಿಶೇಷವಾದ ಮನ್ನಣೆ ಸಲ್ಲಬೇಕು. ಪರಿಸರ

## ಗಾಡ್ಗೀಳ್ ವರದಿಯಲ್ಲೇನಿದೆ?

- ಪಶ್ಚಿಮ ಘಟ್ಟದ ಶೇ 64ರಷ್ಟು ಭಾಗವನ್ನು ಪರಿಸರ ಸೂಕ್ಷ್ಮ ಪ್ರದೇಶ (ESZ) 1, 2 ಮತ್ತು 3 ಎಂದು ಗುರ್ತಿಸಬೇಕು.
- ಪರಿಸರ ಸೂಕ್ಷ್ಮ ಪ್ರದೇಶ (ESZ) 1ಕ್ಕೆ ಅತೀ ಹೆಚ್ಚು ಮಹತ್ವ ನೀಡುವುದು. ಆ ವ್ಯಾಪ್ತಿಯಲ್ಲಿ ಎಲ್ಲ ರೀತಿಯ ಗಣಿಗಾರಿಕೆ, ಉಷ್ಣವಿದ್ಯುತ್ ಸ್ಥಾವರ, ಅಣೆಕಟ್ಟು ನಿರ್ಮಾಣಕ್ಕೆ ಅವಕಾಶವಿಲ್ಲ. ಅವಧಿ ಮುಗಿದ ಯೋಜನೆಗಳಿದ್ದರೆ ಅವುಗಳನ್ನು ತಕ್ಷಣವೇ ಸ್ಥಗಿತಗೊಳಿಸಬೇಕು.
- ಕೃಷಿ ಭೂಮಿ ಪರಿವರ್ತನೆ, ನದಿ ತಿರುವು ಯೋಜನೆಗಳು ಈ ಪ್ರದೇಶದಲ್ಲಿ ಸಾಧುವಲ್ಲ.
- ಪಶ್ಚಿಮ ಘಟ್ಟ ಪರಿಸರ ಪ್ರಾಧಿಕಾರ ರಚನೆ ಮಾಡಿ ಈ ಪ್ರದೇಶದ ಸಂರಕ್ಷಣೆಗೆ ಒತ್ತು ಕೊಡಬೇಕು. ಸುಸ್ಥಿರ ಕೃಷಿ ನೀತಿ ಅನುಸರಿಸಲು ಪ್ರೋತ್ಸಾಹಿಸಿ, ಘಟ್ಟಗಳ ವಿನಾಶವನ್ನು ತಡೆಯಲು ನೀತಿ ನಿರೂಪಣೆಯಲ್ಲಿಯೇ ಬದಲಾವಣೆಗಳನ್ನು ತರಬೇಕು.

## ಕಸ್ತೂರಿ ರಂಗನ್ ವರದಿಯಲ್ಲೇನಿದೆ?

- ಪಶ್ಚಿಮ ಘಟ್ಟದ ಶೇ 37ರಷ್ಟನ್ನು, ಅಂದರೆ ಸುಮಾರು 60 ಸಾವಿರ ಚದರ ಕಿ.ಮೀ. ವ್ಯಾಪ್ತಿಯ ಕಾಡನ್ನು ಪರಿಸರ ಸೂಕ್ಷ್ಮ ಪ್ರದೇಶ (ESA) ವೆಂದು ಘೋಷಿಸಬೇಕು. ಈ ಪೈಕಿ 20,668 ಚದರ ಕಿಲೋಮೀಟರ್ ಕಾಡು ಕರ್ನಾಟಕದಲ್ಲಿದ್ದು, ಒಟ್ಟು 1,576 ಹಳ್ಳಿಗಳನ್ನು ಒಳಗೊಂಡಿದೆ. ಅಂದರೆ ಒಟ್ಟು ಸಂರಕ್ಷಿತ ಪ್ರದೇಶವನ್ನು ಪರಿಗಣಿಸಿದರೆ ಕರ್ನಾಟಕದಲ್ಲಿ ಅತೀ ಹೆಚ್ಚು (ಶೇ 46.50 ರಷ್ಟು) ಸಂರಕ್ಷಿತ ಪ್ರದೇಶವಿದೆ.
- ಸಂರಕ್ಷಿತ ಪ್ರದೇಶದಲ್ಲಿ ಗಣಿಗಾರಿಕೆಗೆ ಸಂಪೂರ್ಣ ನಿಷೇಧ. ಕಲ್ಲುಗಣಿ ನಿಷೇಧ, ಕೆಂಪು ವಲಯದ ಕೈಗಾರಿಕೆಗಳ ಸ್ಥಾಪನೆಗೆ ನಿಷೇಧ ಮತ್ತು ಉಷ್ಣವಿದ್ಯುತ್ ಸ್ಥಾವರ ಸ್ಥಾಪನೆಗೆ ನಿಷೇಧ.
- ಅರಣ್ಯ ಮತ್ತು ವನ್ಯಜೀವಿ ಪ್ರದೇಶದಲ್ಲಿ ಯಾವುದೇ ಮೂಲಸೌಕರ್ಯ ಯೋಜನೆಗಳಿಗೆ ಅನುಮತಿ ನೀಡುವ ಮುನ್ನ ಸಾಧಕಬಾಧಕಗಳ ಅಧ್ಯಯನ ನಡೆಯಬೇಕು.